ಮಂಡಿ ಕುಮಾರ್, ಬೆಂಗಳೂರು
ಹೆಣ್ಣನ್ನು ಸೃಷ್ಟಿಸಿದ ಬ್ರಹ್ಮನಿಗೂ, ಕಲ್ಲಿಗೆ ಜೀವ ತುಂಬಿದ ಶಿಲ್ಪಿಗೂ ವ್ಯತ್ಯಾಸವೇನು?



ಬ್ರಹ್ಮನ ಸೃಷ್ಟಿ ಸಾಕಷ್ಟು ಶಿಲ್ಪಿ(ವಿಷಲ್)ಗಳ ಸೃಷ್ಟಿಗೆ ಪ್ರೇರಕ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಕುಟುಂಬದಲ್ಲಿ ತಾಪತ್ರಯ ಬರುವುದು ಯಾವುದರಿಂದ?
ತಾಪ, ಸಂತಾಪ, ಪ್ರತಾಪಗಳಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ಚುನಾವಣೆಯ ಬದಲಾಗಿ ಪರೀಕ್ಷೆಯ ಮೂಲಕವೇ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಂತಿದ್ದರೆ?
ಡ್ರಗ್ಸ್, ಮುಷ್ಟಿಯುದ್ಧ, ಬ್ಲೇಮ್‌ಗೇಮ್, ‘ಹುಕ್ ಆರ್ ಕ್ರೂಕ್’ ಪರೀಕ್ಷೆಗಳಾದರೆ ಡಿಸ್ಟಿಂಕ್ಷನ್ ಪಡೆದಾರು.

ಮಧುಮತಿ ಅಭಿಷೇಕ್, ಬೆಂಗಳೂರು
ಆಕಾಶಕ್ಕೇ ಏಣಿ ಹಾಕುವ ಟೆಕ್ನಾಲಜಿ ಇದ್ದಿದ್ದರೆ ಏನಾಗುತ್ತಿತ್ತು?



‘ಏಣಿ ಡಿಕ್ಕಿ; ವಿಮಾನ ಪತನ’ ಎನ್ನುವುದು ವೀಕ್ಲಿ ಬ್ರೇಕಿಂಗ್ ನ್ಯೂಸ್ ಆಗುತ್ತಿತ್ತು.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ಹಿಂಬಾಲಕರೇ ಮುಂದೆ ಚಾಲಕರಾಗ್ತಾರೆ. ಯಾಕೆ?
ಲೈನ್ ಹೊಡೆಯುವಾಗ ಹಿಂಬಾಲಕ, ಲಗ್ನವಾದಮೇಲೆ ಚಾಲಕ ಆಗುವುದು ಪುರುಷನಿಯಮ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಕಂಪ್ಲೀಟ್‌ಗೂ ಫಿನಿಷ್‌ಗೂ ಏನು ವ್ಯತ್ಯಾಸ?
ಪರೀಕ್ಷೆ ಕಂಪ್ಲೀಟ್ ಆಗುತ್ತದೆ; ದಡ್ಡ ಫಿನಿಷ್ ಆಗ್ತಾನೆ.

ಮಲ್ಲಿಕಾರ್ಜುನ, ಸುರಧೇನುಪುರ
ಗಂಡ ಸತ್ತಮೇಲೆ ಹೆಂಡತಿಗೆ ಬುದ್ಧಿ ಬರತ್ತಂತೆ. ಹೌದಾ ರಾಮ್‌ಜೀ?
ಸುತ್ತುವರಿಯುವ ವಿವಿಧ ಹದ್ದುಗಳು ಪಾಠ ಕಲಿಸುತ್ತವಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸತಿಯನ್ನು ಇಲ್ಲೇ ಬಿಟ್ಟು ವಿದೇಶಕ್ಕೆ ಹಾರಿದ ಪತಿಯನ್ನು ಬ್ರಹ್ಮಚಾರಿ ಎನ್ನಬಹುದೆ?
ಊಹೂಂ. ಸಮನ್ಸ್ ಜಾರಿಯಾದಾಕ್ಷಣ ಮರಳಬೇಕಾದ ಪೆರೋಲ್‌ಪತಿ.

ಅಶೋಕ ಆರ್. ಹಾಲಣ್ಣನವರ, ಲಕ್ಷ್ಮೇಶ್ವರ
ಹಣೆಬರಹ ಬದಲಾಗುವುದು ಯಾವಾಗ ಗುರೂಜೀ?
ನಿರ್ವ‘ಹಣೆ’ಯ ಚುಕ್ಕಾಣಿಯನ್ನು ಬೇರೆಯವರಿಗೆ ಒಪ್ಪಿಸಿದಾಗ.

ಬಿ.ಆರ್. ಉಷಾ, ಬೆಂಗಳೂರು
ಮದುವೆಮನೆಯಲ್ಲಿ ಊಟ ಮಾಡುವಾಗ ವಿಡಿಯೊ ತೆಗೆಯೋದ್ಯಾಕೆ?
ಉಡುಗೊರೆ ಕೊಡದೆ ಊಟ ಮಾಡಿದವರನ್ನು ಕಂಡುಹಿಡಿಯಲು!

ಹೆಚ್.ಎಂ. ಚನ್ನವೀರಯ್ಯ, ಹೂವಿನಹಡಗಲಿ
ಕುಡುಕ, ಕೆಡುಕ, ಸಿಡುಕ, ಬಾಯ್ಬಡುಕ; ಇವರಲ್ಲಿ ಶ್ರೇಷ್ಠರಾರು?
ಬಾಯ್ಬಡುಕನೇ. ಹೆಡ್‌ಫೋನ್ ಧರಿಸಿ ಕಣ್ಮುಚ್ಚಿ ಕೂತರೆ ಪ್ರಾಬ್ಲಂ ಸಾಲ್ವ್ಡ್.

ಅನಸೂಯ ಟಿ, ಕೇದಿಗೆಮನೆ
ಸೊಳ್ಳೆ ಅನ್ನುವ ಕ್ರಿಮಿಯ ಕುಲ ಯಾವಾಗ ಸಂಪೂರ್ಣ ನಾಶವಾಗತ್ತೆ ರಾಮ್?
ರಾಜಕಾರಣಿಗಳೆಲ್ಲ ಸತ್ಯವನ್ನೇ ನುಡಿಯಲು ಆರಂಭಿಸಿದ ದಿನ.

ಕೆ.ಎಸ್. ಸೋಮೇಶ್ವರ, ಬೆಂಗಳೂರು
ಟೀವಿ ಧಾರಾವಾಹಿಗಳಲ್ಲಿ ಗಂಡು ಪಾತ್ರಧಾರಿಗಳು ಕಡ್ಡಾಯವಾಗಿ ಗಡ್ಡ ಬಿಡುವುದು ಏನನ್ನು ಸೂಚಿಸುತ್ತದೆ?
ನಿರ್ಮಾಪಕರು ಅಷ್ಟಗಲಕ್ಕೆ ಮೇಕಪ್ ಖರ್ಚು ಉಳಿಸುವ ಜಾಣತನವನ್ನು.

## ವಾರದ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ಸಿಗರೇಟ್ ಪ್ಯಾಕ್ ಮೇಲೆ ಎಕ್ಸ್‌ಪೈರಿ ಡೇಟ್ ಇರುವುದಿಲ್ಲ. ಏಕೆ?
ಹೊಗೆ ಹಾಕಿಸ್ಕೊಳ್ಳಕ್ಕೆ ಕ್ಯೂ ನಿಲ್ಲೋವ್ರು ಸಿಗರೇಟನ್ನ ಅಷ್ಟೊಂದು ದಿನ ಉಳಿಸಲ್ಲಾಂತ ಗೊತ್ತು.

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ
ಐಪಿಎಸ್‌ಗೂ ಯುಪಿಎಸ್‌ಗೂ ವ್ಯತ್ಯಾಸವೇನು?
ಪವರ್ ಹೋದರೆ ಐಪಿಎಸ್ ನಾಲಾಯಕ್.

ಕೆ. ಸಂಪತ್‌ಕುಮಾರ್, ಬೆಂಗಳೂರು
ದಾಹ ತೀರಿಸಿಕೊಳ್ಳಲೆಂದು ಪಕ್ಷಿಗಳಿಗೆ ನೀರಿರಿಸಿದರೆ ಅದರಲ್ಲಿ ಕಾಗೆ ಸ್ನಾನ ಮಾಡುತ್ತಲ್ಲಾ...?
ದನ, ವಾಹನ ತೊಳೆದ ಕೆರೆಯ ನೀರನ್ನೇ ಮನುಷ್ಯ ಕುಡಿಯಲು ಬಳಸಿದ್ದೇ ಕಾಗೆಗೆ ಸ್ಫೂರ್ತಿಯಂತೆ.

ಸುಂದರ್ ಜಿ.ಕೆ. ಮಂಗಳೂರು
ಮದುವೆ ಎಂಬ ಬಂಧನವಿಲ್ಲದೆ ಬದುಕು ಚೆನ್ನಾಗಿ ಇರುತ್ತದೆಯೆ?



ಹ್ಞೂಂ ಎಂದವು ಸಕಲ ಪಶುಗಳು.

ಬೂಕನಕೆರೆ ವಿಜೇಂದ್ರ, ಮೈಸೂರು
ಮಹಿಳೆಯರನ್ನು ಅಬಲೆ ಎಂದು ಕರೆಯುವುದೇಕೆ?
ಅದು ಅಂದು. ಈಗ ಎಲ್ಲ ಕ್ಷೇತ್ರಗಳಲ್ಲೂ ‘ಅಬ್ಬಾ! ಲೇ!’ ಎಂದು ಕರೆಯುತ್ತಾರೆ.

ಡಾ.ಸೀಮಂತಿನಿ ದೇಸಾಯಿ, ಬೆಂಗಳೂರು
ಜಾಣಜಾಣೆಯರು ಹೀಗೆ ಒಬ್ಬ ಅತಿ ಜಾಣನನ್ನು ಪ್ರಶ್ನೆ ಕೇಳಿ ಕಾಡುವುದು ಸರಿಯೆ?
ಒರೆಗೆ ಹಚ್ಚದಿದ್ದರೆ ಚಿನ್ನ ಅಪರಂಜಿಯಾಗದಲ್ಲ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಮಾಮರವಿಲ್ಲದ, ಕೋಗಿಲೆಯೂ ಇಲ್ಲದ ಕಾಲವೊಂದು ಬರಬಹುದೆ?
ಚೀನಾ ಮನಸ್ಸು ಮಾಡಿದರೆ ಏನೇನೂ ಇಲ್ಲದ ಕಾಲವೂ ಬರುತ್ತದೆ.

**ರಾಮ್**